Publication :- Hello Mysore.
Date :- 12-08-2016
Page. No. :- 08.

# ಕೆಪಿಎಲ್ 5ನೇ ಆವೃತ್ತಿಗೆ ತಂಡ ಪ್ರಕಟ



ಮೈಸೂರು: ಕಾರ್ಬನ್ ಸ್ಮಾರ್ಟ್ ಕೆಪಿಎಲ್ 5ನೇ ಆವೃತ್ತಿಗೆ ಮೈಸೂರು ವಾರಿಯರ್ಸ್‌ನ 18 ಆಟಗಾರರ ತಂಡ ಪ್ರಕಟವಾಗಿದ್ದು, ಈ ಬಾರಿ ಕೆಪಿಎಲ್‌ನಲ್ಲಿ ಪ್ರಶಸ್ತಿ ಗೆಲ್ಲುವ ವಿಶ್ವಾಸ ಹೊಂದಿದೆ.

ಸೈಕಲ್ ಪ್ಯೂರ್ ಅಗರಬತ್ತೀಸ್‌ನ ಪ್ರಾಯೋಜಕತ್ವದಲ್ಲಿ ಮುಂಬರುವ ಕಾರ್ಬನ್ ಸ್ಮಾರ್ಟ್ ಕೆಪಿಎಲ್ ಸರಣಿಯಲ್ಲಿ ಪ್ರತಿನಿಧಿಸುವ ಆಟಗಾರರ ಅಂತಿಮ ಪಟ್ಟಿ ಘೋಷಿಸಲಾಗಿದೆ.

ಬುಧವಾರ ಬೆಂಗಳೂರಿನಲ್ಲಿ ನಡೆದ ಆಟಗಾರರ ಆಯ್ಕೆ ಪ್ರಕ್ರಿಯೆಯಲ್ಲಿ 18 ಆಟಗಾರರನ್ನು ಮೈಸೂರು ವಾರಿಯರ್ಸ್ ತಂಡದ ಪರವಾಗಿ ಆಡಲು ಆಯ್ಕೆ ಮಾಡಲಾಯಿತು.

ಕೆಪಿಎಲ್ ಐದನೇ ಆವೃತ್ತಿಯಲ್ಲಿ ಮನೀಷ್ ಪಾಂಡೆ, ಸುಚಿತ್, ಕೆ.ಗೌತಮ್ ಮತ್ತು ಅರ್ಜುನ್ ಹೊಯ್ಸಳ ಸೇರಿದಂತೆ ತಂಡದ ನಾಲ್ಕು ಆಟಗಾರರನ್ನು ಉಳಿಸಿಕೊಳ್ಳಲಾಗಿದೆ. ಇವರ ಅನುಭವ ತಂಡಕ್ಕೆ ಹೆಚ್ಚಿನ ಬಲ ನೀಡಲಿದೆ. ಪಂದ್ಯಾವಳಿಯಲ್ಲಿ ಏಳು ಫ್ರಾಂಚೈಸಿಗಳು ಪೈಪೋಟಿ ನೀಡಲಿವೆ.

ಈ ಹೊಸ ತಂಡ ಹೊಸ ಪ್ರತಿಭೆ ಮತ್ತು ಅನುಭವಿ ಆಟಗಾರರನ್ನು ಒಳಗೊಂಡ ಸಶಕ್ತ ತಂಡವಾಗಿದೆ.

ನಮ್ಮ ಹೊಸ ತಂಡ ಹೀಗೆ ಅನುಭವಿ ಹಾಗೂ ಹೊಸ ಪ್ರತಿಭೆಗಳ ಮಿಶ್ರಣದೊಂದಿಗೆ ಅಂತಿಮ ರೂಪ ಪಡೆದ ಬಗ್ಗೆ ನಮಗೆ ಸಂತೋಷವಾಗಿದೆ.

ಪಂದ್ಯಾವಳಿಯಲ್ಲಿ ಈ ಬಾರಿ ಇನ್ನಷ್ಟು ಉತ್ತಮ ಮತ್ತು ಅತ್ಯಾಕರ್ಷಕ ಕ್ರಿಕೆಟ್ ಮನರಂಜನೆಯನ್ನು ಎದುರು ನೋಡಬಹುದು ಎಂಬ ಬಗ್ಗೆ ನನಗೆ ಬಹಳ ನಂಬಿಕೆ ಇದೆ ಎಂದು ಮೈಸೂರು ವಾರಿಯರ್ಸ್‌ನ ಮಾಲೀಕರು ಹೇಳಿದ್ದಾರೆ.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಐಪಿಎಲ್ ಮಾದರಿಯಂತೆ 20–20 ಪಂದ್ಯಾವಳಿಯನ್ನು ಏರ್ಪಡಿಸುತ್ತ ಬಂದಿದ್ದು, 8 ತಂಡಗಳ ನಡುವೆ ಸ್ಪರ್ಧೆ ನಡೆಯಲಿದೆ. 2009ರಲ್ಲಿ ಆರಂಭಗೊಂಡ ಕರ್ನಾಟಕ ಪ್ರೀಮಿಯರ್ ಲೀಗ್ ಈಗ ಐದನೇ ವರ್ಷದ ಪ್ರದರ್ಶನ ನೀಡುತ್ತಿದ್ದು, ಈ ಪಂದ್ಯ ಇದೇ ಸೆಪ್ಟೆಂಬರ್ 16 ರಿಂದ ಆರಂಭ ವಾಗಲಿದೆ.

ಪಂದ್ಯಾವಳಿಯ ಮೊದಲ ಹಂತವನ್ನು ಮೈಸೂರಿನಲ್ಲಿ ಆಯೋಜಿಸಲಾಗಿದ್ದು, ಎರಡನೇ ಹಂತವನ್ನು ಹುಬ್ಬಳ್ಳಿಯಲ್ಲಿ ಆಡಲಾಗುತ್ತದೆ ಮತ್ತು ಫೈನಲ್ ಪಂದ್ಯವನ್ನು ಸಹ ಅಲ್ಲಿಯೇ ನಡೆಸಲಾಗುತ್ತದೆ.

**ಆಟಗಾರರ ಪಟ್ಟಿ:** ಮನಿಷ್ ಪಾಂಡೆ, ಜೆ. ಸುಚೀತ್, ಕೆ.ಗೌತಮ್, ಅರ್ಜುನ್ ಹೊಯ್ಸಳ, ಜೋನಾಥನ್, ಅನಿರುದ್ದ್ ಬಿ. ಸಾಗರ್, ರಾಜೂ ಭಟ್ಕಳ್, ವೈಶಾಕ್ ವಿಜಯ್ ಕುಮಾರ್, ಲಿಯಾನ್ ಖಾನ್, ನಿಹಾಲ್ ಉಳಾಳ್, ಅಭಿಷೇಕ್ ಭಟ್, ಅಕ್ಷಯ್ ಕೊದಾತ್ತ್, ಆನಂದ್ ದೊಡ್ಡಮನಿ, ಕುಶಾಲ್ ವದವಾನಿ, ಪ್ರತೀಕ್ ಆರ್., ನಿಖಿತ್ ಎಸ್ ಸಂಗಂಕಲ್, ವಿ.ಕೌಶಿಕ್.